**ಇಂದು ದಿನಾಂಕ 28.11.2025 ರಂದು ಪಿಡಬ್ಲ್ಯೂ -3 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ವಾರಸ್ಸುದಾರರ ಪರ ವಕೀಲರಿಂದಃ**

**1.** ನಾನು 2 ನೇ ಪಿ.ಯು.ಸಿ. ನಪಾಸಾಗಿದ್ದೇನೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ಜಿ.ಪಿ.ಎ.ನ್ನು ನನಗೆ ವಾದಿಯರು ಬರೆದುಕೊಟ್ಟಿದ್ದಾರೆ. ಅವರಿಗೆ ತುಂಬಾ ವಯಸ್ಸಾಗಿದ್ದು ಶಸ್ತ್ರ ಚಿಕಿತ್ಸೆ ಆಗಿರುವ ಕಾರಣ ಬರೆದುಕೊಟ್ಟಿದ್ದಾರೆ. ನನಗೆ ಮದುವೆಯಾಗಿ 19 ವರ್ಷ ಆಗಿದೆ. ಮುನಿನಂಜಪ್ಪನ ಮಕ್ಕಳು ನನ್ನ ತಾತ ನರಸಿಂಹಯ್ಯ, ಮುನಿವೆಂಕಟಪ್ಪ, ಇನ್ನೊಬ್ಬರ ಹೆಸರು ಗೊತ್ತಿಲ್ಲ. ನರಸಿಂಹಯ್ಯನ ಹೆಂಡತಿಯ ಹೆಸರು ಅಕ್ಕಯ್ಯಮ್ಮ. ನರಸಿಂಹಯ್ಯನಿಗೆ ಮೂರು ಜನ ಮಕ್ಕಳು. ಅವರು 2 ಮತ್ತು 3 ನೇ ವಾದಿ ಮತ್ತು 1 ನೇ ಪ್ರತಿವಾದಿ. ಅಕ್ಕಯ್ಯಮ್ಮನವರು ಈಗ ಅವರ ಮಗನ ಮನೆಯಲ್ಲಿ ಇದ್ದಾರೆ. ದಾವಾ ಸರ್ವೆ ನಂ.2/3, 39 ಗುಂಟೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ. ನನ್ನ ತಾತನಿಗೆ ಅವರ ತಂದೆಯಿಂದ ಬಂದಿದೆ. ಆ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ಆ ರೀತಿ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ 2 ಮತ್ತು 3 ನೇ ಪ್ರತಿವಾದಿ ವಾರಸ್ಸುದಾರರ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**